ಶ್ರೀ ಕೆ. ಸಿದ್ದಯ್ಯ.— ಈಗ ಈ ಯೋಜನೆ ಜಾರಿಯಲ್ಲಿ ಇಲ್ಲದಿರುವುದಕ್ಕೆ ಕಾರಣವೇನು ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಯಾವ ಪಂಚಾಯಿತಿಗಳು ಅಸ್ಪೃಶ್ಯತಾ ನಿವಾರಣೆಗಾಗಿ ಬಹುಮಾನಗಳನ್ನು ಪಡೆದುಕೊಂಡವೋ, ಆ ಪಂಚಾಯಿತಿಗಳಲ್ಲಿ ಅಸ್ಪೃಶ್ಯತೆ ಮತ್ತೆ ಇರುವುದು ತಿಳಿದುಬಂತು. ಅದಕ್ಕಾಗಿ ನಿಲ್ಲಿಸಲಾಯಿತು.

ಶ್ರೀ ಕೆ. ಸಿದ್ದಯ್ಯ.— ಅಂದರೆ ಈ ಯೋಜನೆಯಿಂದ ಏನೂ ಫಲವಾಗಿಲ್ಲ ಎಂದು ಸರ್ಕಾರದ ಅಭಿಪ್ರಾಯವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದು ಸರ್ಕಾರದ ಅಭಿಪ್ರಾಯವಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.— ಈ ರೀತಿ ಬಹುಮಾನ ಕೊಟ್ಟಿರುವ ಗ್ರಾಮಗಳಲ್ಲಿಯೂ ಸಹ ಪ್ರತ್ಯೇಕವಾದ ಬಾವಿಗಳು ಇದ್ದು ಅಸ್ಪೃಶ್ಯತೆ ತಾಂಡವಾಡುತ್ತಿರುವುದು ನಿಜವೇ ಮಂತ್ರಿ ಈ ರೀತಿಬಹುಮಾನ ಕೊಟ್ಟ ಹಣವನ್ನು ಕಟಿಂಕರ ಅಂಗಡಿಯನ್ನು ಕಟ್ಟಿಸುವುದಕ್ಕೆ ಕೊಟ್ಟಿರುವುದು ನಿಜವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಕಟಿಂಕರ ಅಂಗಡಿಯನ್ನು ಕಟ್ಟಿಸುವುದಕ್ಕೆ ಈ ಹಣವನ್ನು ಕೊಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲ. ಈ ರೀತಿ ಬಹುಮಾನ ಕೊಟ್ಟ ಹಣವನ್ನು ಅಸ್ಪೃಶ್ಯ ಜನಾಂಗದವರ ಅಭಿವೃದ್ಧಿಗಾಗಿಯೇ ಉಪಯೋಗಿಸಬೇಕೆಂದು ಹೇಳಲಾಗಿತ್ತು. ಆದರೂ ಕೆಲವು ಗ್ರಾಮಗಳಲ್ಲಿ ಪ್ರತ್ಯೇಕ ಬಾವಿಗಳು ಇರಬಹುದು.

ಶ್ರೀ ಕೆ. ಆರ್. ಶ್ರೀನಿವಾಸಲುನಾಯ್ಡು.— ಅಸ್ಪೃಶ್ಯತಾ ನಿವಾರಣೆಗಾಗಿ ಕೈಗೊಂಡಿರುವ ಕಾರ್ಯಕ್ರಮಗಳು ಏನು ಎಂಬ ಬಗ್ಗೆ ಸ್ವಲ್ಪ ಹೇಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಈ ಸಾಲಿನ ಇಸವಿಯಲ್ಲಿ ಅಸ್ಪೃಶ್ಯತಾ ಆಫೆನ್ಸಸ್ ಆಕ್ಟ್ ಇಡೀ ದೇಶದಾದ್ಯಂತ ಜಾರಿಗೆ ಬಂತು. ರಾಜ್ಯಾಂಗದ ೧೭ನೇ ಆರ್ಟಿಕಲ್‌ನಲ್ಲಿ ಅಸ್ಪೃಶ್ಯತೆಯನ್ನು ಅಪರಾಧ ಎಂದು ಪರಿಗಣಿಸಿರುವುದರಿಂದ, ಎಲ್ಲೆಲ್ಲಿ ಇದು ಕಂಡು ಬರುತ್ತದೋ ಅಂತಹ ಕಡೆಗಳಲ್ಲಿ ಪೋಲೀಸರಿಂದ ಕೇಸ್‌ಗಳನ್ನು ಹಾಕಿಸಲಾಗುತ್ತಿದೆ. ಇದರ ಜೊತೆಗೆ ಈಗ ಮತ್ತೆ ನಾವು ಪ್ರತಿ ಜಿಲ್ಲೆಗೆ ಒಬ್ಬೊಬ್ಬರಂತೆ ಪ್ರಚಾರಕರನ್ನು ಇದಕ್ಕಾಗಿ ನೇಮಕ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡು, ಅದರ ಪ್ರಕಾರ ಈಗ ಸದ್ಯಕ್ಕೆ ೭ ಜನರನ್ನು ನೇಮಕ ಮಾಡಿದ್ದೇವೆ.

ಶ್ರೀ ಕೆ. ಸಿದ್ದಯ್ಯ.— ಈ ಒಂದು ಬಹುಮಾನವನ್ನು ಪಡೆಯುವುದಕ್ಕಾಗಿ ಕೆಲವು ಗ್ರಾಮಪಂಚಾಯಿತಿಯವರು ಸರ್ಕಾರಕ್ಕೆ ತಪ್ಪು ಅಭಿಪ್ರಾಯ ಕೊಟ್ಟು ಬಹುಮಾನವನ್ನು ಏನು ಪಡೆದಿದ್ದಾರೆ, ಅಂತಹವರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದಕ್ಕೇ ಈಗ ಅದನ್ನು ನಿಲ್ಲಿಸಲಾಗಿದೆ. For Peodet indulging in violating these things, there is no law either by Parliamenl or by the State Legislature. The People themselves should think and act according to their conscience. But the Government have got in mind all these things.

HOUSES FOR DEPRESSED CLASS OF PEOPLE IN KOLAR TALUK

177) Sri C. Byre Gowda (Vemgal).—

Will the Minister for Community Development and Social Welfare be pleased to state:—

(*a*) When the construction work of houses for depressed class of people of Narasapur in Kolar taluk was started;

(*b*) the number of houses proposed to be constructed and number of houses now constructed;

(*c*) out of them, the number of houses collapsed and the reason therefor;

(*d*) whether it is a fact that estimates have been prepared for construction of the collapsed houses;

(*e*) if so whether Government take steps to sanction the estimates and construct the houses?

SRI M. MALLIKARJUNA SWAMY. (Minister for Community Development and Social Welfare):—

(*a*) The construction works was started in 1948-49.

(*b*) Houses proposed to be constructed ... 100
Houses constructed 100

(*c*) Houses collapsed 68
These houses have collapsed when there was heavy rain.

(*d*) Yes.

(*e*) Under consideration.

ಶ್ರೀ ಸಿ. ಬೈರೇಗೌಡ.— ಅಧಿಕವಾಗಿ ಮಳೆಯು ಬಿದ್ದಾಗ ಈ ಮನೆಗಳು ಬಿದ್ದು ಹೋಗಿರಬಹುದು ಎಂದು ಹೇಳಿದ್ದೀರಿ. ಇದಕ್ಕೆ ಮಳೆ ಒಂದೇ ಕಾರಣವೋ ಅಥವಾ ಬ್ಯಾಡ್-ವರ್ಕ್‌ಮೆನ್‌ಷಿಪ್ ಕಾರಣವೋ ಎಂಬುದನ್ನು ತಿಳಿಸುತ್ತೀರಾ? ಬ್ಯಾಡ್-ವರ್ಕ್‌ಮೆನ್‌ಷಿಪ್ ಕಾರಣವಾದರೆ ಸಂಬಂಧಪಟ್ಟವರ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಎಲ್ಲ ಕಾರಣಗಳೂ ಇರಬಹುದು. ಮಳೆ ಜಾಸ್ತಿಯಾಗಿ ಬಿದ್ದಿದ್ದು ಕಾರಣ ಇರಬಹುದು. ೧೦೦ ಮನೆಗಳನ್ನು ಕಟ್ಟಿಸಬೇಕೆಂದು ಸರ್ಕಾರ ತೀರ್ಮಾನ ಮಾಡಿದಾಗ, ೧೬ ಮನೆಗಳನ್ನು ಹರಿಜನರೇ ಕಟ್ಟಿಸಿಕೊಂಡರು. ಉಳಿದ ೮೪ ಮನೆಗಳನ್ನು ಕಟ್ಟಿಸಲು ರಾಮಯ್ಯ ಎಂಬ ಕಂಟ್ರಾಕ್ಟರಿಗೆ ವಹಿಸಲಾಯಿತು. ಒಂದೂ ಮನೆಗೆ ೬೦೦ ರೂಪಾಯಿಗಳ ಪ್ರಕಾರ ೪೯,೮೦೦ ರೂಪಾಯಿಗಳನ್ನು ಖರ್ಚು ಮಾಡಿ ಕಟ್ಟಿಸಲಾಯಿತು. ೧೯೫೩ರಲ್ಲಿ ಮಳೆ ಅಧಿಕವಾಗಿ ಬಿದ್ದಾಗ ಕೆಲವು ಮನೆಗಳು ಬಿದ್ದುಹೋದವು. ನಂತರ ಸರ್ಕಾರಿ ಖರ್ಚಿನಲ್ಲಿ ೪೧ ಮನೆಗಳನ್ನು ದುರಸ್ತಿಮಾಡಿಸಿ ಸಂಬಂಧಪಟ್ಟವರಿಗೆ ವಹಿಸಿಕೊಡಲಾಯಿತು. ಈಗ ಒಟ್ಟು ೪೨ ಮನೆಗಳು ಜೀರ್ಣಾವಸ್ಥೆಯಲ್ಲಿವೆ. ಆದಿದ್ರಾವಿಡರಿಗೆ ಸೇರಿದ ೭ ಮನೆಗಳು ಸಹ ಜೀರ್ಣಾವಸ್ಥೆಯಲ್ಲಿವೆ.

ಶ್ರೀ ಸಿ. ಬೈರೇಗೌಡ.— ಕಂಟ್ರಾಕ್ಟರಿಗೆ ಪೂರ್ತಾ ಹಣವನ್ನು ಕೊಡಲಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಹೌದು.

ಶ್ರೀ ಸಿ. ಬೈರೇಗೌಡ.— ಈ ಮನೆಗಳ ಕೆಲಸ ನಡೆಯುತ್ತಿರುವಾಗ ಆಗಿನ ಲೋಕೋಪಯೋಗಿ ಮಂತ್ರಿಗಳಾಗಿದ್ದ ಶ್ರೀ ಚನ್ನಬಸಪ್ಪನವರು ಇನ್‌ಸ್ಪೆಕ್ಷನ್ ಮಾಡಿ ಮನೆಗಳ ಡಿಸೈನನ್ನು ಬದಲಾವಣೆ ಮಾಡಬೇಕು, ಚಪ್ಪಡಿಗೆ ಬದಲು ಆಸ್‌ಬೆಸ್‌ಟೋಸ್ ಷೀಟ್‌ಗಳನ್ನು ಹಾಕಬೇಕೆಂದು ಸರ್ಕಾರಕ್ಕೆ ಶಿಫಾರಸ್ ಮಾಡಿದ್ದು ಗೊತ್ತಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದು ಸರ್ಕಾರದ ಗಮನಕ್ಕೆ ಬಂದಿರಬಹುದು.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.— ನೂರು ಮನೆಗಳನ್ನು ಕಟ್ಟಿಸಿದ ಎಷ್ಟು ವರ್ಷಗಳಲ್ಲಿ ೬೮ ಮನೆಗಳು ಬಿದ್ದುಹೋದವು ಮಂತ್ರಿ ಈ ೬೮ ಮನೆಗಳವರು ಈಗ ಬೀದಿಪಾಲಾಗಿದ್ದಾರೆಯೇ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಕಟ್ಟಿದ ನಾಲ್ಕು ವರ್ಷಗಳಲ್ಲಿ ಅಧಿಕವಾಗಿ ಮಳೆ ಬಿದ್ದಾಗ ಬಿದ್ದು ಹೋದವು. ಈ ರೀತಿ ಬಿದ್ದು ಹೋದ ಮನೆಗಳ ಪೈಕಿ ಕೆಲವನ್ನು ರಿಪೇರಿ ಮಾಡಿ ಕೊಡಲಾಗಿದೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಎಚ್. ಎನ್. ಸಿದ್ದಪ್ಪ.— ಈ ರೀತಿ ಬಿದ್ದು ಹೋಗಿರುವ ಮನೆಗಳನ್ನು ಸರ್ಕಾರದ ಖರ್ಚಿನಲ್ಲಿ ಪುನಃ ಕಟ್ಟಿಸಿಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದಕ್ಕಾಗಿಯೇ ೧,೭೩,೪೮೦ ರೂಪಾಯಿಗಳ ಅಂದಾಜನ್ನು ತಯಾರು ಮಾಡಲಾಗಿದೆ. ಅದು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ.ಎಸ್. ಕೃಷ್ಣನ್.—೬೮೮ ಮನೆಗಳು ಮಳೆ ಬಂದು ಬಿದ್ದು ಹೋಯಿತು ಎಂದು ಹೇಳಿದ್ದೀರಿ? ಇದು ಒಂದೇ ಕಾರಣವೇ ಅಥವಾ ಕಟ್ಟಡಗಳನ್ನು ಸರಿಯಾಗಿ ಕಟ್ಟದೇ ಇರುವುದರಿಂದ ಬಿದ್ದು ಹೋದವೇ ಎಂಬ ಬಗ್ಗೆ ವರದಿ ತರಿಸಿಕೊಂಡು ನೋಡಿದ್ದೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ. — ಮಳೆ ಅಧಿಕವಾಗಿ ಬಂದು ಮನೆಗಳು ಬಿದ್ದು ಹೋಗಿವೆ. ೬೦೦ ರೂಪಾಯಿಗಳಿಗೆ ಒಂದು ಮನೆಯನ್ನು ಕಟ್ಟಿರಬೇಕಾದರೆ, ಆ ಮನೆ ಯಾವ ರೀತಿ ಇರುತ್ತದೆ ಎಂಬುದನ್ನು ಮಾನ್ಯ ಸದಸ್ಯರು ಊಹಿಸಿಕೊಳ್ಳಬಹುದು.

ಶ್ರೀ ಸಿ. ಬೈರೇಗೌಡ.–ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ ನಮಗೆ ಸ್ವಾತಂತ್ರ್ಯ ಬಂದು ೨೫ ವರ್ಷಗಳಾದರೂ ಸಹ ಇವರುಗಳಿಗೆ ಪೂರ್ತಿಯಾಗಿ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಸಾಧ್ಯವಾಗಲಿಲ್ಲ? ಬಿದ್ದು ಹೋದ ಮನೆಯವರು ಇಂದು ಬೀದಿ ಪಾಲಾಗಿದ್ದಾರೆ. ರಾಷ್ಟ್ರ ಜಯಂತಿಯನ್ನು ಆಚರಣೆ ಮಾಡುತ್ತಿರುವ ವರ್ಷದಲ್ಲಿ ಯಾರಾದರೂ ಅಂದರೆ ೧೯೭೩-೭೪ರಲ್ಲಿಯಾದರೂ ಈ ಜನರಿಗೆ ಮನೆಗಳನ್ನು ಕಟ್ಟಿಸಿಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.— ಅದು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಈಗಾಗಲೇ ಉತ್ತರ ಹೇಳಿದ್ದೇನೆ.

MEDICAL TREATMENT FOR SNAKE BITES

236. Sri B. G. Banakar (Hirekerur) —Will the Minister for Health be pleased to state:—

(*a*) the total number of persons to whom Medical treatment was given for snake bites in the Government hospitals in Dharwar district and the number of deaths during the last 3 years;

(*b*) the measures taken by the Government or proposed to be taken for the prevention of snake bites ?

Sri H. Siddaveerappa (Ministr for Health).—

(*a*) 88 persons were given treatment. There were 6 deaths.

(*b*) Anti venine serum vials are supplied to the medical Institutions to be used for snake bites.

ಶ್ರೀ ಬಿ. ಜಿ. ಬಣಕಾರ್.—ಧಾರವಾಡ ಜಿಲ್ಲೆಯಲ್ಲಿ ಎಷ್ಟು ವೈದ್ಯಕೀಯ ಸಂಸ್ಥೆಗಳು ಇವೆ ? ಪಂತ್ಸ್ ಈ ವೈದ್ಯಕೀಯ ಸಂಸ್ಥೆಗಳಲ್ಲಿ ಎಷ್ಟು ವೈದ್ಯಕೀಯ ಸಂಸ್ಥೆಗಳಿಗೆ ಈ ಮೂರು ವರ್ಷಗಳ ಅವಧಿಯಲ್ಲಿ ವಿಷಹಾರಿ ದ್ರವದ ಕಂಪೆನಿಗಳನ್ನು ಒದಗಿಸಿದೆ ಎಂಬುದನ್ನು ಹೇಳುತ್ತೀರಾ ?

†ಶ್ರೀ ಎಚ್. ಸಿದ್ಧವೀರಪ್ಪ.—ಧಾರವಾಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ವೈದ್ಯಕೀಯ ಸಂಸ್ಥೆಗಳು ಇವೆ ಎನ್ನುತಕ್ಕಂಥಾ ಅಂಶಗಳು ಈಗ ನನ್ನಲ್ಲಿ ಇಲ್ಲ. ಹಾವು ಕಡಿದವರು ಎಷ್ಟು ಜನ ಆಸ್ಪತ್ರೆಗೆ ಬಂದಿದ್ದರು, ಎಷ್ಟು ಜನಗಳಿಗೆ ಟ್ರೀಟ್‌ಮೆಂಟ್ ಮಾಡಲಾಯಿತು, ಎಷ್ಟು ಜನ ಬದುಕಿಕೊಂಡರು ಎಂಬುದನ್ನು ಕೊಡ ಲಾಗಿದೆ. ಔಷಧಿ ಬಂದಾಗ ಸ್ಟಾಕು ಇರುತ್ತದೆ. ಸ್ಟಾಕು ಇದ್ದಾಗ ಅದನ್ನು ಕೊಟ್ಟಿದೆ.

Asterirks indicate that remarks or sheeches have not been revised by the member Concerned.